ಅಸಲು ದಾವಾ ನಂ.327/2013

ಪಿ ಡಬ್ಲ್ಯೂ1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕಃ 24-06-2019.

ಪಾಟೀ ಸವಾಲು ಃ- ಶ್ರೀ ಬಿ ಕೆ ವಿ ಪ್ರತಿವಾದಿ ಪರ ವಕೀಲರಿಂದ :

ನಿಪಿ-18 ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ನಿಪಿ-18 ನ್ನು ಪಾಲುಪಟ್ಟಿಯನ್ನು ಅನುಕೂಲಕ್ಕೆ ತಕ್ಕಂತೆ ನಾವು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಯ ದಿನಾಂಕ ಮತ್ತು ಇಸವಿ ನನಗೆ ಹೇಳಲಾಗುವುದಿಲ್ಲ. ಸದರಿ ಪಾಲುಪಟ್ಟಿಯನ್ನು ಮಾಡುವ ಸಂದರ್ಭದಲ್ಲಿ ನನ್ನ ಅಣ್ಣ ರಂಗೇಗೌಡ , ಸಾಕ್ಷಿದಾರರಾದ ಕಾಡೇಗೌಡ ,ನಂಜೇಗೌಡ , ಚಾಮೇಗೌಡ ,ಕೃಷ್ಣೇಗೌಡ ಮತ್ತು ಬಿಕ್ಲದಾರರಾದ ನಂಜುಂಡಸ್ವಾಮಿ ರವರು ಹಾಜರಿದ್ದು ನಾವುಗಳು ಚನ್ನರಾಯಪಟ್ಟಣದ ಹಳೇ ತಾಲ್ಲೋಕು ಆಫೀಸಿನ ಬಳಿ ಮಾಡಿಕೊಂಡಿರುತ್ತೇವೆ . ನನ್ನ ಸಹೋದರನಾದ ಸಣ್ಣರಂಗೇಗೌಡ ರವರು ಸದರಿ ಪಾಲುಪಟ್ಟಿಯಲ್ಲಿನ ಒಕ್ಕಣೆಯನ್ನು ಹೇಳಿ ಬರೆಸಿರುತ್ತಾರೆ . ಸದರಿ ಪಾಲುಪಟ್ಟಿಯಲ್ಲಿನ ಆಸ್ತಿಯ ಸರ್ವೆ ನಂಬರ್ ನೆನಪಿರುವುದಿಲ್ಲ. ಸದರಿ ಪಾಲುಪಟ್ಟಿಯಲ್ಲಿನ ಆಸ್ತಿಯನ್ನು ಮೂರು ವಿಭಾಗಗಳಾಗಿದ್ದು ಅದರಲ್ಲಿ 1 ನೇ ಭಾಗದಲ್ಲಿ 1 ಎಕರೆ 10 ಗುಂಟೆ ಜಮೀನು ಇದ್ದು ಸದರಿ ಜಮೀನು ಚಾನಲ್ ಗೆ ಭೂಸ್ವಾಧೀನವಾಗಿದ್ದು ಅದರಲ್ಲಿ ನನ್ನ ಹಿರಿಯಣ್ಣನಿಗೆ 1 ಗುಂಟೆ ಜಮೀನು ಇರುತ್ತದೆ . 2 ನೇ ಭಾಗದಲ್ಲಿ 38 ಗುಂಟೆ ಜಮೀನು ಇದ್ದು , 3 ನೇ ಭಾಗದಲ್ಲಿ 16 ಗುಂಟೆ ಜಮೀನು ಇರುತ್ತದೆ . ಸರ್ವೆ ನಂಬರ್ 40 ರಲ್ಲಿ 33 ಗುಂಟೆ ಜಮೀನು ಇದ್ದು ನನ್ನ ಅಣ್ಣನಾದ ಸಣ್ಣರಂಗೇಗೌಡರಿಗೆ 17 ಗುಂಟೆ ಜಮೀನು ಬಂದಿದ್ದು ಉಳಿದ 16 ಗುಂಟೆ ನನ್ನ ಪಾಲಗೆ ಬಂದಿರುತ್ತದೆ . ಸರ್ವೆ ನಂ.41 ರಲ್ಲಿ 33 ಗುಂಟೆ ಜಮೀನು ಇದ್ದು ನನ್ನ ಅಣ್ಣನಾದ ಸಣ್ಣರಂಗೇಗೌಡರಿಗೆ 17 ಗುಂಟೆ ಜಮೀನು ಬಂದಿದ್ದು ಸದರಿ ಜಮೀನಿನಲ್ಲಿ ನನಗೆ 15 ಗುಂಟೆ ಜಮೀನು ಬಂದಿರುತ್ತದೆ . ನನ್ನ ತಂದೆಗೆ 7 ಜನ ಮಕ್ಕಳು . ಸದರಿ ಪಾಲುಪಟ್ಟಿ ಬರೆಸಿದ ಸಮಯದಲ್ಲಿ ನನ್ನ ಸಹೋದರ ಸಹೋದರಿಯಾದ ದೇವರಮ್ಮ , ರಂಗೇಗೌಡ , ಸಣ್ಣರಂಗೇಗೌಡ , ಪಾರ್ವತಮ್ಮ ಮತ್ತು ನಾನು ಇದ್ದೆವು. ಸದರಿ ದಾವೆಯಲ್ಲಿನ 1 ನೇ ಪ್ರತಿವಾದಿಯ ಪತ್ನಿಯು ನನ್ನ ಖಾಸಾ ಅಕ್ಕ ಪಾರ್ವತಮ್ಮ ಆಗಿರುತ್ತಾರೆ . ಸದರಿ ಪಾಲುಪಟ್ಟಿಯನ್ನು ಬರೆಸಿದ ಸಮಯದಲ್ಲಿ ನನ್ನ ಅಕ್ಕನಾದ ಪಾರ್ವತಮ್ಮನವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಅವರಿಗೆ ಸದರಿ ಆಸ್ತಿಯಲ್ಲಿ ಯಾವುದೇ ಭಾಗವನ್ನು ನೀಡುವುದಾಗಿ ಮಾತುಕತೆಯಾಗಿರುವುದಿಲ್ಲ. ಆರ್ ಆರ್ ಟಿ ಅರ್ಜಿ ಸಂಖ್ಯೆ 198ಃ1993-1994 ರಲ್ಲಿ ನನ್ನ ಅಕ್ಕನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಾನು ನನ್ನ

ಅನುಕೂಲಕ್ಕೆ ತಕ್ಕಂದು ನಿಪಿ.18 ನ್ನು ಬರೆಸಿಕೊಂಡಿದ್ದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ.19 ನ್ನು ಕಂದಾಯ ಇಲಾಖೆಯವರೊಂದಿಗೆ ಶಾಮೀಲಾಗಿ ನಾನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ.18 ರಿಂದ ನಿಪಿ.21 ರವರೆಗಿನ ದಾಖಲೆಗಳೆಲ್ಲವು ಈ ಸದರಿ ದಾವೆಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.23 ರಿಂದ 32 ರ ವರೆಗಿನ ರೆವಿನ್ಯೂ ದಾಖಲೆಗಳು ಸದರಿ ದಾವಾ ಸ್ವತ್ತುಗಳಿಗೆ ಸಂಬಂಧಪಡುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ತಡವಾಗಿ ಹಾಜರುಮಾಡಿ ಸದರಿ ದಾವೆಯನ್ನು ವಿಳಂಬಮಾಡುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಅಕ್ಕನಪಾಲಿಗೆ ಬಂದಿದ್ದ ಅರಿಶಿಣ ಕುಂಕುಮಕ್ಕೆ ಕೊಟ್ಟ ಆಸ್ತಿಯನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ದಾವಾ ದಾಖಲುಮಾಡಿರುತ್ತೇನೆಂದರೆ ಸರಿಯಲ್ಲ. ನನ್ನ ಅಕ್ಕನ ಮಕ್ಕಳು ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದು ಅದರಲ್ಲಿ ಬೆಳೆ ಬೆಳೆಯುತ್ತಿರುತ್ತಾರೆಂದರೆ ಸುಳ್ಳು . ನಮ್ಮ ಗ್ರಾಮದ ಮುಖಂಡರು ಸಹ ಸದರಿ ದಾವೆಯಲ್ಲಿ ಪ್ರತಿವಾದಿಗಳ ಪರವಾಗಿ ಸಾಕ್ಷಿಯನ್ನು ನುಡಿದಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,
3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,